## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 392(478)
ಸದಸ್ಯರ ಹೆಸರು : ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 19-02-2024
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಉಪನ್ಯಾಸಕರ ಹುದ್ದೆಗಳ ಸಂಖ್ಯೆ ಎಷ್ಟು; ಹಾಗೂ ನೇಮಕ ಮಾಡಿಕೊಳ್ಳಲಾದ ಅತಿಥಿ ಉಪನ್ಯಾಸಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದಿನಾಂಕ:01-01-2024ಕ್ಕೆ ಅಂತ್ಯಗೊಂಡಂತೆ ಖಾಲಿಯಿರುವ ಉಪನ್ಯಾಸಕರ ಸಂಖ್ಯೆ:4076.<br><br>ನೇಮಕ ಮಾಡಿಕೊಳ್ಳಲಾದ ಅತಿಥಿ ಉಪನ್ಯಾಸಕರ ಸಂಖ್ಯೆ:4055.<br><br>(ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ) |
| ಆ) | ಅತಿಥಿ ಉಪನ್ಯಾಸಕರಿಗೆ ಮಾಹೆಯಾನ ಪಾವತಿಸುತ್ತಿರುವ ಗೌರವಧನ ಎಷ್ಟು; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ:ಇಪಿ 50 ಡಿಜಿಡಿ 2022 ದಿನಾಂಕ:05-07-2022ರಲ್ಲಿ ಈ ಹಿಂದೆ ನೀಡಲಾಗುತ್ತಿದ್ದ ಮಾಸಿಕ ಗೌರವ ಧನ ರೂ.9,000/ಗಳನ್ನು ಪರಿಷ್ಕರಿಸಿ ರೂ. 12,000/-ಗಳಿಗೆ ಹೆಚ್ಚಿಸಲಾಗಿರುತ್ತದೆ. |
| ಇ) | ಶಿಕ್ಷಕರ ತರಬೇತಿ ಜೊತೆಗೆ ನೆಟ್, ಕೆ-ಸೆಟ್, ಪಿ.ಎಚ್.ಡಿ ಹಾಗೂ ಸೇವಾ ಅನುಭವ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಮಾಸಿಕ ಪಾವತಿಸುತ್ತಿರುವ ಗೌರವ ಸಂಭಾವನೆ ತೀರಾ ಕಡಿಮೆಯಿದ್ದು, ಜೀವನ ನಿರ್ವಹಣೆ ಕಷ್ಟಸಾಧ್ಯವಾಗುತ್ತಿರುವುದರಿಂದ ಅತಿಥಿ ಉಪನ್ಯಾಸಕರ ಗೌರವ ಸಂಭಾವನೆಯನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ಇಂತಹ ಪ್ರಸ್ತಾವನೆ ಸರ್ಕಾರದ ಪರಿಗಣನೆಯಲ್ಲಿ ಇರುವುದಿಲ್ಲ. |
| ಈ) | ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುವ ಅತಿಥಿ ಉಪನ್ಯಾಸಕರಿಗೆ ಸೇವಾ ಹಿರಿತನದ ಆಧಾರದ ಮೇಲೆ ಗೌರವಧನ ಪಾವತಿಸುವ ಕುರಿತು ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು) | |

| | | |
|---|---|---|
| ಉ) | ಸರ್ಕಾರ ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿಗೆ ತೆಗೆದುಕೊಂಡಿರುವ ಕ್ರಮಗಳೇನು; ವಿಷಯವಾರು ಎಷ್ಟು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರ ಉದ್ದೇಶಿಸಿದೆ ? (ವಿವರ ನೀಡುವುದು) | ಪದವಿ ಪೂರ್ವ ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ವಿವಿಧ ವಿಷಯಗಳ ನೇರ ನೇಮಕಾತಿ ಕೋಟಾದ ಹುದ್ದೆಗಳ ಪೈಕಿ ಒಟ್ಟು 814 ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಅನುಮತಿಯನ್ನು ನೀಡಲಾಗಿದೆ.<br><br>ಆದರೆ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳ ನೇರ ನೇಮಕಾತಿಯಲ್ಲಿ, ಮೀಸಲಾತಿ ಬಿಂದುಗಳಿಗೆ ಸಂಬಂಧಿಸಿದಂತೆ ನಿರ್ದೇಶನಾಲಯದಿಂದ ಮಾರ್ಗದರ್ಶನ ಕೋರಿ ಪ್ರಸ್ತಾವನೆ ಸಲ್ಲಿಸಿದ್ದು, ಈ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಸೇವಾ ನಿಯಮಗಳು)ಯ ಅಭಿಪ್ರಾಯ ಕೋರಿ ಕಡತ ಸಲ್ಲಿಸಲಾಗಿರುತ್ತದೆ.<br><br>ಈ ಪ್ರಸ್ತಾವನೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಸೇವಾ ನಿಯಮಗಳು)ಯ ಅಭಿಪ್ರಾಯ ದೊರೆತ ನಂತರ ನಿಯಮಾನುಸಾರ ಪರಿಶೀಲಿಸಲಾಗುವುದು.<br><br>ವಿಷಯವಾರು ಹುದ್ದೆಗಳ ಮಾಹಿತಿಯ ವಿವರವನ್ನು ಅನುಬಂಧ-2ರಲ್ಲಿ ಒದಗಿಸಿದೆ. |

**ಸಂಖ್ಯೆ: ಇಪಿ 49 ಡಿಜಿಡಬ್ಲ್ಯೂ 2024**

(ಎಸ್.ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

2

## ಅನುಬಂಧ-1

### ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಉಪನ್ಯಾಸಕರ ಹುದ್ದೆ ಹಾಗೂ ಅತಿಥಿ ಉಪನ್ಯಾಸಕರ ನೇಮಕ ಮಾಡಿಕೊಳ್ಳಲಾದ ಸಂಖ್ಯೆ (ಜಿಲ್ಲಾವಾರು)

| ಕ್ರ ಸಂ | ಜಿಲ್ಲೆ | ದಿನಾಂಕ: 01-01-2024 ಕ್ಕೆ ಖಾಲಿ ಹುದ್ದೆಗಳ ಸಂಖ್ಯೆ | ಅತಿಥಿ ಉಪನ್ಯಾಸಕರ ಸಂಖ್ಯೆ |
|---|---|---|---|
| 1. | ಬೆಂಗಳೂರು ಉತ್ತರ | 21 | 66 |
| 2. | ಬೆಂಗಳೂರು ದಕ್ಷಿಣ | 16 | 36 |
| 3. | ಬೆಂಗಳೂರು ಗ್ರಾಮಾಂತರ | 47 | 64 |
| 4. | ರಾಮನಗರ | 106 | 83 |
| 5. | ಬಳ್ಳಾರಿ | 138 | 190 |
| 6. | ಚಿಕ್ಕೋಡಿ | 151 | 183 |
| 7. | ಬೆಳಗಾವಿ | 131 | 152 |
| 8. | ಬಾಗಲಕೋಟೆ | 166 | 190 |
| 9. | ವಿಜಯಪುರ | 89 | 130 |
| 10. | ಬೀದರ್ | 62 | 50 |
| 11. | ದಾವಣಗೆರೆ | 79 | 80 |
| 12. | ಚಿತ್ರದುರ್ಗ | 124 | 90 |
| 13. | ಚಿಕ್ಕಮಗಳೂರು | 167 | 135 |
| 14. | ಗದಗ್ | 108 | 105 |
| 15. | ಹಾವೇರಿ | 130 | 106 |
| 16. | ಧಾರವಾಡ | 75 | 55 |
| 17. | ಕಲಬುರಗಿ | 142 | 110 |
| 18. | ಯಾದಗಿರಿ | 93 | 110 |
| 19. | ಹಾಸನ | 306 | 210 |
| 20. | ಚಿಕ್ಕಬಳ್ಳಾಪುರ | 107 | 114 |
| 21. | ಕೋಲಾರ | 150 | 172 |
| 22. | ಚಾಮರಾಜನಗರ | 80 | 94 |
| 23. | ಮೈಸೂರು | 130 | 160 |
| 24. | ಮಂಡ್ಯ | 198 | 125 |
| 25. | ಉತ್ತರ ಕನ್ನಡ | 156 | 190 |
| 26. | ರಾಯಚೂರು | 117 | 111 |
| 27. | ಕೊಪ್ಪಳ | 147 | 148 |
| 28. | ದಕ್ಷಿಣ ಕನ್ನಡ | 231 | 241 |
| 29. | ಉಡುಪಿ | 162 | 184 |
| 30. | ಶಿವಮೊಗ್ಗ | 126 | 110 |
| 31. | ತುಮಕೂರು | 253 | 200 |
| 32. | ಕೊಡಗು | 68 | 61 |
| | ಒಟ್ಟು | **4076** | **4055** |

ಉಪ ನಿರ್ದೇಶಕರು (ಅಭಿವೃದ್ಧಿ)
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)
ಮಲ್ಲೇಶ್ವರಂ, ಬೆಂಗಳೂರು-560012

## ಅನುಬಂಧ-2

ಸರ್ಕಾರದ ಆದೇಶ ಸಂಖ್ಯೆ: ಇಪಿ 25 ಡಿಜಿಡಿ 2022 ದಿನಾಂಕ: 02/08/2022 ರಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಕಲ್ಯಾಣ ಕರ್ನಾಟಕ ಭಾಗದಲ್ಲಿ 371-ಜೆ ಗೆ ಮೀಸಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದದಲ್ಲಿ ಖಾಲಿ ಇರುವ 07 ವಿವಿಧ ವಿಷಯಗಳ ಒಟ್ಟು 36 ಉಪನ್ಯಾಸಕರ ಹುದ್ದೆಗಳು ಮತ್ತು ಸರ್ಕಾರಿ ಆದೇಶ ಸಂಖ್ಯೆ: ಇಪಿ 9 ಡಿಜಿಡಿ 2022, ದಿನಾಂಕ: 18/08/2022 ರಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದದಲ್ಲಿ ಖಾಲಿ ಇರುವ 10 ವಿವಿಧ ವಿಷಯಗಳ ಒಟ್ಟು 778 ಉಪನ್ಯಾಸಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅನುಮತಿ ನೀಡಿರುತ್ತದೆ. ಸದರಿ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ: | ವಿಷಯ | ಇಪಿ 9 ಡಿಜಿಡಿ 2022, ದಿನಾಂಕ: 18/08/2022 ರಂತೆ ನೀಡಿರುವ ಉಪನ್ಯಸಕರ ಸಂಖ್ಯೆ: | ಇಪಿ 25 ಡಿಜಿಡಿ 2022 ದಿನಾಂಕ: 02/08/2022 ರಂತೆ ನೀಡಿರುವ ಉಪನ್ಯಸಕರ ಸಂಖ್ಯೆ: | |
|---|---|---|---|---|
| 01 | ಕನ್ನಡ | 100 | 05 | |
| 02 | ಇಂಗ್ಲೀಷ್ | 120 | 05 | |
| 03 | ಇತಿಹಾಸ | 120 | 04 | |
| 04 | ಅರ್ಥಶಾಸ್ತ್ರ | 180 | 04 | |
| 05 | ಭೂಗೋಳಶಾಸ್ತ್ರ | 20 | 00 | |
| 06 | ವಾಣಿಜ್ಯಶಾಸ್ತ್ರ | 80 | 10 | |
| 07 | ಸಮಾಜಶಾಸ್ತ್ರ | 75 | 04 | |
| 08 | ರಾಜ್ಯಶಾಸ್ತ್ರ | 75 | 04 | |
| 09 | ಮನ:ಶಾಸ್ತ್ರ | 02 | 00 | |
| 10 | ಗಣಕವಿಜ್ಞಾನ | 06 | 00 | |
| | ಒಟ್ಟು | 778 | 36 | 814 |

ಉಪ ನಿರ್ದೇಶಕರು(ಆಡಳಿತ),
ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)

Scanned by CamScanner

- P4

(8)

**ಕರ್ನಾಟಕ ಸರ್ಕಾರ**
**ನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡರಸ್ತೆ,**
**ಮಲ್ಲೇಶ್ವರಂ, ಬೆಂಗಳೂರು 560012.**

---

**ಸಂಖ್ಯೆ: ಪಪೂಶಿ/ಸಿ-2/ಎಲ್‌ಸಿ-392 (478)/2023-24** **ದಿನಾಂಕ: 12-02-2024**

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ) ಇವರ ಪ್ರಶ್ನೆ ಸಂಖ್ಯೆ: 392 (478) ಕ್ಕೆ ಕರಡು ಉತ್ತರ

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಉಪನ್ಯಾಸಕರ ಹುದ್ದೆಗಳ ಸಂಖ್ಯೆ ಎಷ್ಟು; ಹಾಗೂ ನೇಮಕ ಮಾಡಿಕೊಳ್ಳಲಾದ ಅತಿಥಿ ಉಪನ್ಯಾಸಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದಿನಾಂಕ: 01-01-2024 ಕ್ಕೆ ಅಂತ್ಯಗೊಂಡಂತೆ ಖಾಲಿಯಿರುವ ಉಪನ್ಯಾಸಕರ ಸಂಖ್ಯೆ: 4076.<br>ನೇಮಕ ಮಾಡಿಕೊಳ್ಳಲಾದ ಅತಿಥಿ ಉಪನ್ಯಾಸಕರ ಸಂಖ್ಯೆ: 4055.<br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| (ಆ) | ಅತಿಥಿ ಉಪನ್ಯಾಸಕರಿಗೆ ಮಾಹೆಯಾನ ಪಾವತಿಸುತ್ತಿರುವ ಗೌರವಧನ ಎಷ್ಟು; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಇಪಿ 50 ಡಿಜಿಡಿ 2022 ದಿನಾಂಕ: 05-07-2022 ರಲ್ಲಿ ಈ ಹಿಂದೆ ನೀಡಲಾಗುತ್ತಿದ್ದ ಮಾಸಿಕ ಗೌರವ ಧನ ರೂ. 9,000/- ಗಳನ್ನು ಪರಿಷ್ಕರಿಸಿ ರೂ. 12,000/- ಗಳಿಗೆ ಹೆಚ್ಚಿಸಲಾಗಿರುತ್ತದೆ. |
| (ಇ) | ಶಿಕ್ಷಕರ ತರಬೇತಿ ಜೊತೆಗೆ ನೆಟ್ ಕೆ-ಸೆಟ್, ಪಿ.ಎಚ್.ಡಿ ಹಾಗೂ ಸೇವಾ ಅನುಭವ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಮಾಸಿಕ ಪಾವತಿಸುತ್ತಿರುವ ಗೌರವ ಸಂಭಾವನೆ ತೀರಾ ಕಡಿಮೆಯಿದ್ದು, ಜೀವನ ನಿರ್ವಹಣೆ ಕಷ್ಟಸಾಧ್ಯವಾಗುತ್ತಿರುವುದರಿಂದ ಅತಿಥಿ ಉಪನ್ಯಾಸಕರ ಗೌರವ ಸಂಭಾವನೆಯನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ಸರ್ಕಾರದ ಹಂತದಲ್ಲಿ ಉತ್ತರಿಸಬೇಕಿದೆ. |
| (ಈ) | ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುವ ಅತಿಥಿ ಉಪನ್ಯಾಸಕರಿಗೆ ಸೇವಾ ಹಿರಿತನದ ಆಧಾರದ ಮೇಲೆ ಗೌರವಧನ ಪಾವತಿಸುವ ಕುರಿತು ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು) | |
| (ಉ) | [illegible] ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿಗೆ ತೆಗೆದುಕೊಂಡಿರುವ ಕ್ರಮಗಳೇನು, ವಿಷಯವಾರು ಎಷ್ಟು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರ ಉದ್ದೇಶಿಸಿದೆ ? (ವಿವರ ನೀಡುವುದು) | ಖಾಲಿಯಿರುವ ನೇರ ನೇಮಕಾತಿ ಕೋಟಾದ [illegible] 814 ಹುದ್ದೆಗಳನ್ನು ಭರ್ತಿ [illegible] ಆದರೆ, ಈ ಕಚೇರಿ ಪತ್ರ ಸಂಖ್ಯೆ: DPUE-EST10-LAP-2-2022-E-72970 ದಿನಾಂಕ: 21-09-2023 ರಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳ ಮೀಸಲಾತಿ ಬಿಂದುಗಳಿಗೆ ಸಂಬಂಧಿಸಿದಂತೆ ಸರ್ಕಾರದ ಮಾರ್ಗದರ್ಶನ ಕೋರಲಾಗಿದೆ ಮಾರ್ಗದರ್ಶನ ಬಂದ ನಂತರ ನಿಯಮಾನುಸಾರ ಕ್ರಮವಹಿಸಲಾಗುವುದು. |

13/2/24

13/2/24 SA

ನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ).

(6)

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಪಿ 9 ಡಿಜಿಡಿ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:18/08/2022.

ಇವರಿಂದ:-
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
6ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು-560 001.

ಇವರಿಗೆ:-
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ 18ನೇ ಕ್ರಾಸ್,
ಬೆಂಗಳೂರು.
ಮಾನ್ಯರೆ,

ವಿಷಯ:- ಪದವಿ ಪೂರ್ವ ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ವಿವಿಧ ವಿಷಯಗಳ ಉಪನ್ಯಾಸಕರ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮಾಡಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:- ತಮ್ಮ ಪತ್ರ ಸಂಖ್ಯೆ:ಪಪೂಶಿಇ/ಆ.ವಿ-ಎ/ವಿ.ನಿ.-5/ಉ.ನೇ/2021-22 ದಿನಾಂಕ:28-12-2021.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿನ ಅಂಶಗಳನ್ನು ಪರಿಶೀಲಿಸಲಾಗಿದೆ. ಪದವಿ ಪೂರ್ವ ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಈ ಕೆಳಕಂಡ ಒಟ್ಟು 778 ವಿವಿಧ 10 ವಿಷಯಗಳ ಉಪನ್ಯಾಸಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಸರ್ಕಾರದ ಅನುಮತಿಯನ್ನು ನೀಡಲಾಗಿದೆ ಎಂದು ತಮಗೆ ತಿಳಿಸಲು ನಾನು ನಿರ್ದೇಶಿತಳಾಗಿದ್ದೇನೆ.

| ಕ್ರಮ ಸಂಖ್ಯೆ | ವಿಷಯ | ಉಪನ್ಯಾಸಕರ ಸಂಖ್ಯೆ |
|---|---|---|
| 1. | ಕನ್ನಡ | 100 |
| 2. | ಇಂಗ್ಲೀಷ್ | 120 |
| 3. | ಇತಿಹಾಸ | 120 |
| 4. | ಅರ್ಥಶಾಸ್ತ್ರ | 180 |
| 5. | ಭೂಗೋಳಶಾಸ್ತ್ರ | 20 |
| 6. | ವಾಣಿಜ್ಯಶಾಸ್ತ್ರ | 80 |
| 7. | ಸಮಾಜಶಾಸ್ತ್ರ | 75 |
| 8. | ರಾಜ್ಯಶಾಸ್ತ್ರ | 75 |
| 9. | ಮನ:ಶಾಸ್ತ್ರ | 02 |
| 10. | ಗಣಕ ವಿಜ್ಞಾನ | 06 |
| | ಒಟ್ಟು | 778 |

ಈ ಪತ್ರವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 64 ವೆಚ್ಚ-8/2022 ದಿನಾಂಕ:20-07-2022ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ತಮ್ಮ ನಂಬುಗೆಯ,
Padmini S.N. 18/08/22
(ಪದ್ಮಿನಿ ಎಸ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
(ಪದವಿ ಪೂರ್ವ ಶಿಕ್ಷಣ).

(5)

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಪಿ 25 ಡಿಜಿಡಿ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:02/08/2022.

ಇವರಿಂದ:-
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
6ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು-560 001.

ಇವರಿಗೆ:-
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ 18ನೇ ಕ್ರಾಸ್,
ಬೆಂಗಳೂರು.

ಮಾನ್ಯರೆ,

ವಿಷಯ:- ಪದವಿ ಪೂರ್ವ ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಕಲ್ಯಾಣ-ಕರ್ನಾಟಕ ಭಾಗದಲ್ಲಿ 371-ಜೆ ಮೀಸಲಿರುವ ವಿವಿಧ ವಿಷಯಗಳ ಉಪನ್ಯಾಸಕರ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:- ತಮ್ಮ ಪತ್ರ ಸಂಖ್ಯೆ:ಪಪೂಶಿಇ/ಆ.ವಿ-ಎ/ವಿ.ನಿ.-5/ಉ.ನೇ/2021-22 ದಿನಾಂಕ:19-03-2021.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಪದವಿ ಪೂರ್ವ ಶಿಕ್ಷಣ ಇಲಾಖೆಯ ಕಲ್ಯಾಣ-ಕರ್ನಾಟಕ ಭಾಗದಲ್ಲಿ 371-ಜೆ ಗೆ ಮೀಸಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದದಲ್ಲಿ ಖಾಲಿ ಇರುವ 07 ವಿವಿಧ (ಕನ್ನಡ, ಆಂಗ್ಲ, ಇತಿಹಾಸ, ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರ, ಸಮಾಜಶಾಸ್ತ್ರ ಹಾಗೂ ರಾಜ್ಯಶಾಸ್ತ್ರ) ವಿಷಯಗಳ ಒಟ್ಟು 36 ಉಪನ್ಯಾಸಕರ ಹುದ್ದೆಗಳನ್ನು ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ:ಆಇ 02 ಬಿಇಎಂ 2021 ದಿನಾಂಕ:24-11-2021ರನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಸರ್ಕಾರದ ಅನುಮತಿ ನೀಡಲಾಗಿದೆ ಎಂದು ತಮಗೆ ತಿಳಿಸಲು ನಾನು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

(ಪದ್ಮಿನಿ ಎಸ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
(ಪದವಿ ಪೂರ್ವ ಶಿಕ್ಷಣ).

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2022–23ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರುಗಳ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಹಾಗೂ ಅತಿಥಿ ಉಪನ್ಯಾಸಕರುಗಳಿಗೆ ಗೌರವ ಸಂಭಾವನೆಯನ್ನು ಹೆಚ್ಚಿಸುವ ಬಗ್ಗೆ.

**ಓದಲಾಗಿದೆ:-**
1) ಸರ್ಕಾರದ ಆದೇಶ ಸಂಖ್ಯೆ:ಇಡಿ 72 ಎಸ್‌ಟಿಬಿ 2016 ದಿನಾಂಕ:04–07–2016.
2) ಸರ್ಕಾರದ ಆದೇಶ ಸಂಖ್ಯೆ:ಇಪಿ 61 ಡಿಜಿಡಿ 2021 ದಿನಾಂಕ:26–10–2021.
3) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಪತ್ರ ಸಂಖ್ಯೆ:ಪಪೂಶಿಇ/ಅ.ವಿ.–ಎ/ವಿ.ನಿ.–5/ಅ.ಉ.ಸೇ./2021–22 ದಿನಾಂಕ:13–04–2022 ಮತ್ತು ದಿನಾಂಕ:103–05–2022.

* * *

**ಪ್ರಸ್ತಾವನೆ:-**

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿಕೊಳ್ಳಲು ಮಾರ್ಗಸೂಚಿಗಳನ್ನು ನಿಗದಿಪಡಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಇಡಿ 72 ಎಸ್‌ಟಿಬಿ 2016 ದಿನಾಂಕ:04–07–2016ರಲ್ಲಿನ ಷರತ್ತುಗಳಿಗೊಳಪಟ್ಟು ಮತ್ತು 2021–22ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳಿಗೆದುರಾಗಿ ಒಟ್ಟು 3552 ಅತಿಥಿ ಉಪನ್ಯಾಸಕರನ್ನು 08 ತಿಂಗಳುಗಳಿಗೆ ಮಾಸಿಕ ರೂ.9,000/–ಗಳ ಗೌರವಧನದ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿತ್ತು.

2021–22ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ಪರೀಕ್ಷೆಗಳು ಏಪ್ರಿಲ್ 13ರವರೆಗೆ ನಡೆದಿದ್ದು, ದ್ವಿತೀಯ ಪಿಯುಸಿ ಪರೀಕ್ಷೆಗಳು ಮೇ 18ರವರವಿಗೂ ನಡೆಸಲಾಗುತ್ತಿದೆ. 2021–22ನೇ ಶೈಕ್ಷಣಿಕ ಸಾಲಿನಲ್ಲಿ ನೇಮಕ ಮಾಡಿಕೊಂಡ ಅತಿಥಿ ಉಪನ್ಯಾಸಕರುಗಳನ್ನು ಪ್ರಥಮ ಪಿಯುಸಿ ಪರೀಕ್ಷೆಗಳು ಹಾಗೂ ಮೌಲ್ಯಮಾಪನ ಕಾರ್ಯಗಳಿಗೆ ಉಪಯೋಗಿಸಿಕೊಂಡಿರುವುದರಿಂದ ಸದರಿ ಅತಿಥಿ ಉಪನ್ಯಾಸಕರುಗಳಿಗೆ ಮಾರ್ಚ್ ಮತ್ತು ಏಪ್ರಿಲ್ 2022ರವರೆಗೆ(ಕಾರ್ಯನಿರ್ವಹಿಸಿ ಅವಧಿಗೆ ಮಾತ್ರ) ಗೌರವಧನವನ್ನು ಬಿಡುಗಡೆ ಮಾಡುವಂತೆ ಜಿಲ್ಲಾ ಉಪ ನಿರ್ದೇಶಕರುಗಳು ಕೋರಿರುತ್ತಾರೆ. ಮುಂದುವರೆದು, 2022–23ನೇ ಶೈಕ್ಷಣಿಕ ಸಾಲಿನಲ್ಲಿ ಬಡ್ತಿ, ವಯೋನಿವೃತ್ತಿ, ನಿಧನ ಹಾಗೂ ಇತರೆ ಕಾರಣಗಳಿಂದ ತೆರವಾಗಿರುವ ವಿವಿಧ

ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿಕೊಳ್ಳಬೇಕಾಗಿರುತ್ತದೆ. ಸದರಿ ವಿವರವು ಈ ಕೆಳಕಂಡಂತಿದೆ-

| ಕ್ರಮ ಸಂಖ್ಯೆ | ವಿಷಯ | ಸಂಖ್ಯೆ |
|---|---|---|
| 1. | ದಿನಾಂಕ:01-04-2023ರವರೆಗಿನ ಖಾಲಿ ಇರುವ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳ ಸಂಖ್ಯೆ | 3271 |
| 2. | ಬಡ್ತಿ, ವಯೋನಿವೃತ್ತಿ, ನಿಧನ ಹಾಗೂ ಇತರೆ ಕಾರಣಗಳಿಂದ ತೆರವಾಗಬಹುದಾದ ಉಪನ್ಯಾಸಕರ ಹುದ್ದೆಗಳ ಸಂಖ್ಯೆ | 100 |
| 3. | ಹೊಸ ಸಂಯೋಜನೆಗಳಿಗೆ ಹುದ್ದೆ ಮಂಜೂರಾಗದ ವಿಷಯಗಳಿಗೆ ನೇಮಕ ಮಾಡಿಕೊಳ್ಳಬೇಕಾದ ಅತಿಥಿ ಉಪನ್ಯಾಸಕರ ಸಂಖ್ಯೆ | 337 |
| | ಒಟ್ಟು | 3708 |

ಮೇಲಿನ ಎಲ್ಲಾ ಅಂಶಗಳನ್ನು ಅವಗಾಹನೆಗೆ ಸಲ್ಲಿಸುತ್ತಾ, 2021-22ನೇ ಶೈಕ್ಷಣಿಕ ಸಾಲಿನಲ್ಲಿ ನೇಮಕಗೊಂಡು ಮಾರ್ಚ್ ಹಾಗೂ ಏಪ್ರಿಲ್ 2022ರವರೆಗೆ ಕಾರ್ಯನಿರ್ವಹಿಸಿದ 3325 ಅತಿಥಿ ಉಪನ್ಯಾಸಕರುಗಳಿಗೆ ಮಾಹೆಯಾನ ಗೌರವಧನನ್ನು ಲೆಕ್ಕಶೀರ್ಷಿಕೆ 2202-02-109-0-13-324(ಗೌರವಧನ)ರಲ್ಲಿ 2022-23ನೇ ಸಾಲಿಗೆ ಒದಗಿಸಲಾಗಿರುವ ಆಯ-ವ್ಯಯದಲ್ಲಿ ವೆಚ್ಚ ಭರಿಸಲು ಅನುಮತಿಸಲು ಹಾಗೂ 2022-23ನೇ ಶೈಕ್ಷಣಿಕ ಸಾಲಿನಲ್ಲಿ ಮೇಲೆ ತಿಳಿಸಿರುವ ವಿವರಗಳಂತೆ 3708 ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿಕೊಳ್ಳುವಂತೆ ಹಾಗೂ ಸದರಿ ಅತಿಥಿ ಉಪನ್ಯಾಸಕರುಗಳಿಗೆ ಇಲ್ಲಿಯವರೆಗೆ ಹಲವು ವರ್ಷಗಳಿಂದ ರೂ.9,000/-ಗಳ ಗೌರವ ಸಂಭಾವನೆಯನ್ನು ನೀಡಲಾಗುತ್ತಿತ್ತು. ಆದರೆ, ಅದನ್ನು ಹೆಚ್ಚಿಸುವಂತೆ ಸಾಕಷ್ಟು ಬೇಡಿಕೆ ಬರುತ್ತಿರುವುದರಿಂದ ಹಾಗೂ ಇತ್ತೀಚೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಗೌರವ ಸಂಭಾವನೆಯನ್ನು ಹೆಚ್ಚಿಸಿ ಆದೇಶಿಸಲಾಗಿದ್ದು, ಆದರಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಗೌರವ ಸಂಭಾವನೆಯನ್ನು ರೂ.9,000/- ರಿಂದ ರೂ.15,000/-ಗಳಿಗೆ ಹೆಚ್ಚಿಸಲು ಕೋರುತ್ತಾ, ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು ಮೇಲೆ(3) ರಲ್ಲಿ ಓದಲಾದ ಪತ್ರಗಳಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಪಿ 50 ಡಿಜಿಡಿ 2022 ಬೆಂಗಳೂರು, ದಿನಾಂಕ:05-07-2022.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ಇಡಿ 72 ಎಸ್‌ಟಿಬಿ 2016 ದಿನಾಂಕ:04-07-2016ರಲ್ಲಿನ ಷರತ್ತುಗಳಿಗೊಳಪಟ್ಟು ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 2022-23ನೇ ಶೈಕ್ಷಣಿಕ ಸಾಲಿನ ಅವಧಿಗೆ ಖಾಲಿ ಇರುವ ಬೋಧಕ ಹುದ್ದೆಗಳಿಗೆದುರಾಗಿ ಒಟ್ಟು 3708 ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಲು ಮತ್ತು ಈಗಾಗಲೇ ನೇಮಕಾತಿಗೊಂಡು ಕಾರ್ಯನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರುಗಳಿಗೆ ನೀಡಲಾಗುತ್ತಿದ್ದ ಮಾಸಿಕ ಗೌರವ ಧನ ರೂ.9,000/-ಗಳನ್ನು ಪರಿಷ್ಕರಿಸಿ ರೂ.12,000/-ಗಳಿಗೆ ಹೆಚ್ಚಿಸಿ ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿಕೊಳ್ಳಲು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:ಆಇ 504 ವೆಚ್ಚ-8/2022 ದಿನಾಂಕ:30-06-2022ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪದ್ಮಿನಿ ಎಸ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ(ಪದವಿ ಪೂರ್ವ ಶಿಕ್ಷಣ)

ಇವರಿಗೆ:-

1. ಮಹಾಲೇಖಪಾಲರು(ಎ & ಇ), ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು.
3. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-8, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಜಿಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ(ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಮುಖಾಂತರ).
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

FP/49/DCMW/24 (1)

**ಕರ್ನಾಟಕ ವಿಧಾನ ಪರಿಷತ್ತು**

**ಚುಕ್ಕೆ ಗುರುತಿನ ಪ್ರಶ್ನೆ**

ಸಂಖ್ಯೆ:ಕವಿಪ:478:152ನೇ:ಅ:2024

ವಿಧಾನ ಪರಿಷತ್ತಿನ ಸಚಿವಾಲಯ
ಅಂಚೆ ಪೆಟ್ಟಿಗೆ ಸಂಖ್ಯೆ:5079.
ಬೆಂಗಳೂರು-560001. ದಿನಾಂಕ:05.02.2024.

**ಸರ್ಕಾರದ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿ/**
**ಪ್ರಧಾನ ಕಾರ್ಯದರ್ಶಿಯವರಿಗೆ**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ**

UN-STARRED

ಮಾನ್ಯರೇ,

ಸಭಾಪತಿಯವರು ಅಂಗೀಕರಿಸಿದ ರೀತ್ಯಾ ವಿಧಾನ ಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆಯನ್ನು ಕಳುಹಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

392 (478)

ಸಮೂಹ: I
ಉತ್ತರಿಸಬೇಕಾದ ದಿನಾಂಕ:19.02.2024

ಕಾರ್ಯದರ್ಶಿಯವರ ಪರವಾಗಿ,
ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ಸದಸ್ಯರಾದ **ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)** ಅವರ ಪ್ರಶ್ನೆಯನ್ನು ಕಳುಹಿಸಿಕೊಡಲಾಗಿದೆ.

**ವಿಷಯ: ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಅತಿಥಿ ಉಪನ್ಯಾಸಕರ ಗೌರವ ಸಂಭಾವನೆ ಹೆಚ್ಚಿಸುವ ಬಗ್ಗೆ**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 478

**ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು** ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೇ:-

ಅ) ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಉಪನ್ಯಾಸಕರ ಹುದ್ದೆಗಳ ಸಂಖ್ಯೆ ಎಷ್ಟು; ಹಾಗೂ ನೇಮಕ ಮಾಡಿಕೊಳ್ಳಲಾದ ಅತಿಥಿ ಉಪನ್ಯಾಸಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಅತಿಥಿ ಉಪನ್ಯಾಸಕರಿಗೆ ಮಾಹೆಯಾನ ಪಾವತಿಸುತ್ತಿರುವ ಗೌರವಧನ ಎಷ್ಟು; (ವಿವರ ನೀಡುವುದು)

ಇ) ಶಿಕ್ಷಕರ ತರಬೇತಿ ಜೊತೆಗೆ ನೆಟ್, ಕೆ-ಸೆಟ್, ಪಿ.ಎಚ್.ಡಿ ಹಾಗೂ ಸೇವಾ ಅನುಭವ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಮಾಸಿಕ ಪಾವತಿಸುತ್ತಿರುವ ಗೌರವ ಸಂಭಾವನೆ ತೀರಾ ಕಡಿಮೆಯಿದ್ದು, ಜೀವನ ನಿರ್ವಹಣೆ ಕಷ್ಟಸಾಧ್ಯವಾಗುತ್ತಿರುವುದರಿಂದ ಅತಿಥಿ ಉಪನ್ಯಾಸಕರ ಗೌರವ ಸಂಭಾವನೆಯನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಈ) ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುವ ಅತಿಥಿ ಉಪನ್ಯಾಸಕರಿಗೆ ಸೇವಾ ಹಿರಿತನದ ಆಧಾರದ ಮೇಲೆ ಗೌರವಧನ ಪಾವತಿಸುವ ಕುರಿತು ಸರ್ಕಾರದ ನಿಲುವೇನು; (ಮಾಹಿತಿ ನೀಡುವುದು)

ಉ) ಸರ್ಕಾರ ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿಗೆ ತೆಗೆದುಕೊಂಡಿರುವ ಕ್ರಮಗಳೇನು; ವಿಷಯವಾರು ಎಷ್ಟು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರ ಉದ್ದೇಶಿಸಿದೆ? (ವಿವರ ನೀಡುವುದು)

ಕರ್ನಾಟಕ ಸರ್ಕಾರ
ಆಯುಕ್ತರು, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ
ಹಾಗೂ ಸಾಮಾಜಿಕ ಭದ್ರತೆ & ಪಿಂಚಣಿಗಳು, ಕಂದಾಯ ಇಲಾಖೆ,
ಕಂದಾಯ ಭವನ, 5ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು- 560009.
ದೂರವಾಣಿ ಸಂಖ್ಯೆ: 080-22232040,22232012 ಇ-ಮೇಲ್ :dssp2008@gmail.com

ಸಂಖ್ಯೆ: CKSDMA/SSP/SCSE/SFF/9/2025/e-1879769 ದಿನಾಂಕ:19.05.2026.

ಗೆ,
ಸರ್ಕಾರದ ಕಾರ್ಯದರ್ಶಿ,
ಕಂದಾಯ ಇಲಾಖೆ
(ವಿ.ನಿ. ಸಾ.ಭ.ಯೋ),
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಮಾನ್ಯರೇ,

ವಿಷಯ: ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಗೌರವಧನ ಮತ್ತು ಕುಟುಂಬ ಪಿಂಚಣಿ ಹಾಗೂ ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದ್ದ ಚಳುವಳಿಗಾರರಿಗೆ ನೀಡುತ್ತಿರುವ ರಾಜ್ಯ ಗೋವಾ ಗೌರವಧನ ಮತ್ತು ಕುಟುಂಬ ಪಿಂಚಣಿಯ ಬಾಕಿ ಇರುವ ಪಿಂಚಣಿ ಪಾವತಿಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1. ತಮ್ಮ ಕಾರ್ಯಾಲಯದ ಪತ್ರ ಸಂಖ್ಯೆ: ಕಂಇ 4 ಪಿ.ಎಫ್.ಜಿ 2022 ದಿನಾಂಕ: 04.08.2025 ಮತ್ತು 19.11.2025.
2. ಈ ಕಾರ್ಯಾಲಯದ ಸಮ ಸಂಖ್ಯೆಪತ್ರದ ದಿನಾಂಕ:08.01.2026 ಮತ್ತು 25.02.2026.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಗೌರವಧನ ಮತ್ತು ಕುಟುಂಬ ಮಾಸಾಶನ ಹಾಗೂ ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದ್ದ ಚಳುವಳಿಗಾರರಿಗೆ ನೀಡುತ್ತಿರುವ ರಾಜ್ಯ ಗೋವಾ ಗೌರವಧನ ಮತ್ತು ಕುಟುಂಬ ಮಾಸಾಶನ ಪಿಂಚಣಿಯ ಬಾಕಿ ಪಾವತಿಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ಸ್ವಾತಂತ್ರ್ಯ ಹೋರಾಟಗಾರರು ಜೀವಂತವಿರುವ ಬಗ್ಗೆ ಅಥವಾ ನಿಧನ ಹೊಂದಿದ್ದಲ್ಲಿ ನಿಧನ ಹೊಂದಿದ ದಿನಾಂಕ ಮತ್ತು ಅವರ ಕಾನೂನುಬದ್ಧ ವಾರಸುದಾರರ ಮಾಹಿತಿಯನ್ನು ಕ್ರೋಢೀಕರಿಸಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಉಲ್ಲೇಖ (1) ರ ಪತ್ರಗಳಲ್ಲಿ ನಿರ್ದೇಶಿಸಲಾಗಿರುತ್ತದೆ.

ಉಲ್ಲೇಖ (1) ರ ಪತ್ರದ ನಿರ್ದೇಶನಗಳಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಂದ ಮಾಹಿತಿ ಕೋರಲಾಗಿ ಧಾರವಾಡ, ಕೊಡಗು, ದಕ್ಷಿಣ ಕನ್ನಡ, ಮೈಸೂರು, ಚಾಮರಾಜನಗರ, ವಿಜಯಪುರ, ಹಾವೇರಿ ಮತ್ತು ತುಮಕೂರು ಜಿಲ್ಲೆಗಳನ್ನು ಹೊರತುಪಡಿಸಿ ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಬಾಕಿ ಪಿಂಚಣಿ ಸಂಬಂಧ ಒಟ್ಟು 18 ಜಿಲ್ಲೆಗಳಿಂದ ಒಟ್ಟು ರೂ.3,45,23,340/- ಗಳಿಗೆ ಹಾಗೂ ಗೋವಾ ಸ್ವಾತಂತ್ರ್ಯ ಹೋರಾಟಗಾರರ ಬಾಕಿ ಪಿಂಚಣಿ ಸಂಬಂಧ ಒಟ್ಟು 11 ಜಿಲ್ಲೆಗಳಿಂದ ಒಟ್ಟು ರೂ.41,31,936/- ಗಳಿಗೆ ಪ್ರಸ್ತಾವನೆ ಸ್ವೀಕೃತವಾಗಿದ್ದು, ಅನುದಾನ ಬಿಡುಗಡೆಗೆ ಕೋರಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

Digitally signed by
Honnamba S
Date: 19-05-2026
12:38:02

ಆಯುಕ್ತರು,
ಕೆ.ಎಸ್.ಡಿ.ಎಂ.ಎ & ಎಸ್.ಎಸ್.ಪಿ,
ಕಂದಾಯ ಇಲಾಖೆ.

25/05/2026

2

## ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಹಿಂಬಾಕಿ ಪಾವತಿಗಾಗಿ ಕೋರಲಾಗಿರುವ ಜಿಲ್ಲಾವಾರು ಅನುದಾನದ ವಿವರ

| ಕ್ರ.ಸಂ | ಜಿಲ್ಲೆ | ಒಟ್ಟು ಫಲಾನುಭವಿಗಳು | ಒಟ್ಟು ಹಿಂಬಾಕಿ ಪಾವತಿಗಾಗಿ ಕೋರಲಾಗಿರುವ ಅನುದಾನ |
|---|---|---|---|
| 1 | ಕಲಬುರಗಿ | 40 | 2382333 |
| 2 | ಕೋಲಾರ | 4 | 1010000 |
| 3 | ಉತ್ತರ ಕನ್ನಡ | 13 | 1707546 |
| 4 | ಕೊಪ್ಪಳ | 2 | 340000 |
| 5 | ಚಿಕ್ಕಬಳ್ಳಾಪುರ | 2 | 560000 |
| 6 | ಚಿಕ್ಕಮಗಳೂರು | 2 | 473333 |
| 7 | ಚಿತ್ರದುರ್ಗ | 149 | 2110000 |
| 8 | ದಾವಣಗೆರೆ | 1 | 9032 |
| 9 | ಬಾಗಲಕೋಟೆ | 2 | 53225 |
| 10 | ಬೆಂಗಳೂರು ಗ್ರಾಮಾಂತರ ಜಿಲ್ಲೆ | 2 | 340000 |
| 11 | ಬೆಂಗಳೂರು ನಗರ ಜಿಲ್ಲೆ | 20 | 3730000 |
| 12 | ಬೆಳಗಾವಿ | 130 | 14684000 |
| 13 | ಮಂಡ್ಯ | 35 | 1830000 |
| 14 | ರಾಯಚೂರು | 2 | 130000 |
| 15 | ವಿಜಯನಗರ ಜಿಲ್ಲೆ | 14 | 273871 |
| 16 | ವಿಜಯಪುರ | 4 | 1010000 |
| 17 | ಶಿವಮೊಗ್ಗ | 24 | 3880000 |
| ಒಟ್ಟು | | 446 | ₹ 3,45,23,340.00 |

## ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಗೌರವಧನ ಹಾಗೂ ಕುಟುಂಬ ಪಿಂಚಣಿ ಹಿಂಬಾಕಿ ಪಾವತಿ ಕುರಿತು

| ಕ್ರಮ ಸಂಖ್ಯೆ | ಜಿಲ್ಲೆ | ತಾಲ್ಲೂಕು | ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಹೆಸರು | ಗೌರವಧನ ಪಡೆಯುತ್ತಿದ್ದಾರೆಯೇ? (ಹೌದು/ಇಲ್ಲ) | ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಮರಣದ ದಿನಾಂಕ | ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಮರಣದ ನಂತರ ಕುಟುಂಬ ಪಿಂಚಣಿ ಪಡೆಯಬೇಕಾಗಿರುವ ಕಾನೂನುಬದ್ಧ ವಾರಸುದಾರ ವಿವರ | ಈ ಹಿಂದೆ ಹಿಂಬಾಕಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಪತ್ರ ಸಂಖ್ಯೆ ಮತ್ತು ದಿನಾಂಕ | ಹಿಂಬಾಕಿ ಪಾವತಿಗಾಗಿ ಕೋರುತ್ತಿರುವ ಅವಧಿ | ಹಿಂಬಾಕಿ ಅವಧಿಯಲ್ಲಿ ಪಾವತಿಸಬೇಕಾದ ಮಾಸಿಕ ಪಿಂಚಣಿ ದರ | ಹಿಂಬಾಕಿ ಪಾವತಿಗೆ ಬಾಕಿ ಇರುವ ಒಟ್ಟು ಮೊತ್ತ |
|---|---|---|---|---|---|---|---|---|---|---|
| 1 | ಬಾಗಲಕೋಟೆ | ಜಮಖಂಡಿ | ಗೋವಿಂದಪ್ಪ ಸಂಗಾಪೂರ | ಹೌದು | 03-05-2024 | ದೊಡ್ಡವ್ವ ಗೋವಿಂದಪ್ಪ ಸಂಗಾಪೂರ | ಪತ್ರ ಸಂ:ಕಂಶಾ/ FFP/CR-01/2024-25 ದಿನಾಂಕ:30-09-2024 | ಜೂನ್-2024 & ಜುಲೈ-2024 | 10,000 | 20000 |
| 2 | ಬಾಗಲಕೋಟೆ | ಬಾಗಲಕೋಟೆ | ಗಂಗವ್ವ ಆಸಂಗೆಪ್ಪ ಮೇಟಿ | ಹೌದು | 31-03-2024 | ದ್ಯಾಮವ್ವ ಆಸಂಗೆಪ್ಪ ಮೇಟಿ | ಪತ್ರ ಸಂ:ಜಿಅಬಾ/ FFP/CR-338/2023-24 ದಿನಾಂಕ:23-09-2025 | 22-12-2021 ರಿಂದ 31-03-2022 | 10,000 | 33225 |
| 3 | ಚಿಕ್ಕಮಗಳೂರು | ಅಜ್ಜಂಪುರ | ವೈ.ಜಿ ಹನುಮಂತಪ್ಪ | ಹೌದು | 10-11-2020 | ಶ್ರೀಮತಿ ಈರಮ್ಮ ಕೋಂ ಲೇಟ್ ವೈ.ಜಿ ಹನುಮಂತಪ್ಪ | FFP 07/2021 ದಿನಾಂಕ: 25-05-2022 | ಮೇ 2020 ರಿಂದ 10-11-2020 ಹಾಗೂ 01-12-2020 ರಿಂದ ಮೇ 2022 | 10,000 | 243333 |
| 4 | ಚಿಕ್ಕಮಗಳೂರು | ತರೀಕೆರೆ | ಟಿ.ಸಿ ಸುಬ್ರಹ್ಮಣ್ಯಂ | ಹೌದು | 24-02-1996 | ಸರಸ್ವತಮ್ಮ ಕೋಂ ಲೇಟ್ ಟಿ.ಸಿ. ಸುಬ್ರಹ್ಮಣ್ಯಂ | ಸ್ವಾ.ಹೋ/ಸಿಆರ್/22/2021-22 ದಿನಾಂಕ: 29-03-2022 | ಮೇ 2020 ರಿಂದ ಮಾರ್ಚ್ 2022 | 10,000 | 230000 |
| 5 | ವಿಜಯಪುರ | ವಿಜಯಪುರ | ಶ್ರೀಮತಿ ತಾಯಿದೇವಿ ವಸ್ತ್ರದ | ಹೌದು | 0 | 0 | ಪತ್ರ ನಂ.FFP/CR 04/ 2022-23 ದಿನಾಂಕ 04-09-2023 | ಫೆಬ್ರುವರಿ -2018 ರಿಂದ ಸೆಪ್ಟೆಂಬರ್ 2022 | 10,000 | 500000 |
| 6 | ವಿಜಯಪುರ | ನಿಡಗುಂದಿ | ಶ್ರೀಮತಿ ಹಸನಮ್ಮ ಎಂ. ಬಾಗೇವಾಡಿ | ಹೌದು | 0 | 0 | ಪತ್ರ ನಂ.FFP/CR 04/ 2022-23 ದಿನಾಂಕ 04-09-2023 | ಮೇ -2021 ರಿಂದ ಮಾರ್ಚ್ -2022 | 10000 | 110000 |
| 7 | ವಿಜಯಪುರ | ಚಡಚಣ | ಶ್ರೀಮತಿ ಶರಣಮ್ಮ ಅರವತ್ತು | ಇಲ್ಲ | 06-09-2021 | ಶ್ರೀ ಕಲ್ಲಪ್ಪ ಮಲ್ಲಪ್ಪ ಅರವತ್ತಿ ಸಾ।। ಇಂಚಗೇರಿ ತಾ।।ಚಡಚಣ | 1)ಪತ್ರ ನಂ.FFP/CR 04/ 2022-23 ದಿನಾಂಕ 04-09-2023, 2) ಕಂ.ಇ/NSAP/FFP/ವಿವ/22/2025-26 ದಿನಾಂಕ 14-12-2025 | ಮೇ-2020 ರಿಂದ ಆಗಸ್ಟ್ -2021 | 5,000 | 80000 |
| 8 | ವಿಜಯಪುರ | ಚಡಚಣ | ಶ್ರೀಮತಿ ಶಿವಬಾಯಿ ಅರವತ್ತು | ಇಲ್ಲ | 02-08-2024 | ಶ್ರೀ ಸಂಗಪ್ಪ ಮಲ್ಲಪ್ಪ ಅರವತ್ತಿ ಸಾ।। ಇಂಚಗೇರಿ ತಾ।।ಚಡಚಣ | 1)ಪತ್ರ ನಂ.FFP/CR 04/ 2022-23 ದಿನಾಂಕ 04-09-2023, 2) ಕಂ.ಇ/NSAP/FFP/ವಿವ/22/2025-26 ದಿನಾಂಕ 14-12-2025 | ಮೇ-2020 ರಿಂದ ಆಗಸ್ಟ್ -2021 ಸೆಪ್ಟೆಂಬರ್- 2021 ರಿಂದ ಆಗಸ್ಟ್ -2023 | 5,000 10,000 | 320000 |
| 9 | ಚಿಕ್ಕಬಳ್ಳಾಪುರ | ಚಿಂತಾಮಣಿ | ಆರ್. ಸತ್ಯವತಿ ದೇವಿ ಕೋಂ ಲೇಟ್ ಎನ್.ಎಸ್. ರಂಗನಾಥರಾವ್ | ಇಲ್ಲ | - | — | ಕಂಇ 4 ಪಿಎಫ್ ಜಿ 2022 ದಿನಾಂಕ:04/08/2025 ಮತ್ತು ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ರವರ ಪತ್ರ ಸಂಖ್ಯೆ: ಸ್ವಾ.ಹೋ/ಸಿಆರ್/11/2021-22 ದಿನಾಂಕ:08/04/2022 & 29/06/2022 & 14/11/2024 | ಅಕ್ಟೋಬರ್-2019 ರಿಂದ ಮಾರ್ಚ್-2024 | 10,000 | 540000 |
| 10 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | ದೊಡ್ಡಮ್ಮಣ್ಣಿ ಕೋಂ ಲೇಟ್ ಕೆ.ನಾರಾಯಣ ಸ್ವಾಮಿ | ಇಲ್ಲ | - | — | ಕಂಇ 4 ಪಿಎಫ್ ಜಿ 2022 ದಿನಾಂಕ:04/08/2025 ಮತ್ತು ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ರವರ ಪತ್ರ ಸಂಖ್ಯೆ: ಸ್ವಾ.ಹೋ/ಸಿಆರ್/13/2021-22 ದಿನಾಂಕ:30/07/2022 ಮತ್ತು ಸ್ವಾ.ಹೋ/ಸಿಆರ್/01/2023-24 ದಿನಾಂಕ:20/02/2025 | ಫೆಬ್ರವರಿ & ಮಾರ್ಚ್-2021 | 10,000 | 20000 |

| | | | | | | | | | | |
|---|---|---|---|---|---|---|---|---|---|---|
| 11 | ಕೊಪ್ಪಳ | ಕೊಪ್ಪಳ | ಶ್ರೀಮತಿ ಕಳಕವ್ವ ಎಸ್ ಹಿರೇಗೌಡರ್ | ಹೌದು | - | - | REV/DCK/FFP/08/CNO:8975 7/2022 Dated: 19/09/2022 | May 2020 to March 20222 | 5000 10000 | 230000 |
| 12 | ಕೊಪ್ಪಳ | ಕುಷ್ಟಗಿ | ಶ್ರೀ ಪುರುಷೋತ್ತಮಾಚಾರ್ಯ ಬಿನ್ ಶ್ರೀನಿವಾಸಾಚಾರ್ಯ | ಹೌದು | - | - | REV/DCK/NSAP/02/E:14152 2/2023-24 Dated: 03/05/2024 | March-2023 to Feb 2024 | 10000 | 110000 |
| 13 | ಬೆಂಗಳೂರು ಗ್ರಾಮಾಂತರ ಜಿಲ್ಲೆ | ದೇವನಹಳ್ಳಿ | ಆರ್ ಶಿವಯ್ಯ | ಇಲ್ಲ | - | ಶ್ರೀಮತಿ ಎಸ್.ನಾಗರತ್ನಮ್ಮ | BRDC-NSAONSAP/24/2025, ದಿನಾಂಕ:21.11.2025 | ದಿ.01.05.2020 ರಿಂದ 31.03.2022 (23 ತಿಂಗಳ ಪಿಂಚಣಿ ಪಾವತಿಗೆ ಬಾಕಿ ಇರುತ್ತದೆ) | 10,000 | 230000 |
| 14 | ಬೆಂಗಳೂರು ಗ್ರಾಮಾಂತರ ಜಿಲ್ಲೆ | ದೊಡ್ಡಬಳ್ಳಾಪುರ | ಡಿ.ಪಾಪಣ್ಣ | ಇಲ್ಲ | - | ಶ್ರೀಮತಿ ಹೆಚ್.ಬಿ.ಶಕುಂತಲ | BRDC-NSAONSAP/24/2025, ದಿನಾಂಕ:21.11.2025 | ದಿ.01.05.2020 ರಿಂದ 31.03.2021(11 ತಿಂಗಳ ಪಿಂಚಣಿ ಪಾವತಿಗೆ ಬಾಕಿ ಇರುತ್ತದೆ) | 10,000 | 110000 |
| 15 | ಮಂಡ್ಯ | ಮಂಡ್ಯ | ಶ್ರೀ ಹೆಚ್.ಸಿ ಚೌಡಯ್ಯ | ಇಲ್ಲ | 12-06-2008 | ಪುಟ್ಟಮ್ಮ ಕೋಂ ಲೇ: ಹೆಚ್.ಸಿ ಚೌಡಯ್ಯ | ಪಿ.ಎಫ್ ,ಎಸ್ 04/201-20 ದಿನಾಂಕ:- 15-09-2022 | November 2020 to February 2021 | 10,000 | 40000 |
| 16 | ಮಂಡ್ಯ | ಮಂಡ್ಯ | ಶ್ರೀ ಸಿ ರಾಮಯ್ಯ | ಇಲ್ಲ | - | ಕಾನೂನು ಬದ್ಧ ವಾರಸುದಾರರಾದ ಇವರು ಕೊಟ್ಟಿರುವ ವಿಳಾಸದಲ್ಲಿ ವಾಸವಿರುವುದಿಲ್ಲ ಹಾಗೂ ದೂರವಾಣಿ ಸಂಪರ್ಕಕ್ಕೂ ಸಿಗುತ್ತಿಲ್ಲ. | ಪಿ.ಎಫ್ ,ಎಸ್ 04/201-20 ದಿನಾಂಕ:- 15-09-2022 | November 2020 to october 2021 | 10,000 | 120000 |
| 17 | ಮಂಡ್ಯ | ಮಂಡ್ಯ | ಶ್ರೀ ಹೆಚ್.ಎನ್.ಕೃಷ್ಣಮೂರ್ತಿ | ಇಲ್ಲ | 09-09-2011 | ಎ.ಜಿ.ಜಯಲಕ್ಷ್ಮಿ ಕೋಂ ಲೇ:ಹೆಚ್.ಎನ್ ಕೃಷ್ಣಮೂರ್ತಿ | ಪಿ.ಎಫ್ ,ಎಸ್ 04/201-20 ದಿನಾಂಕ:- 15-09-2022 | November 2020 to June 2021 | 10,000 | 80000 |
| 18 | ಮಂಡ್ಯ | ಮಂಡ್ಯ | ಶ್ರೀ ಕಾವೇರಿ ಗಿರಿಯಪ್ಪ | ಇಲ್ಲ | 21-12-2012 | ತಿಮ್ಮಮ್ಮ ಕೋಂ ಲೇ: ಕಾವೇರಿ ಗಿರಿಯಪ್ಪ | ಪಿ.ಎಫ್ ,ಎಸ್ 04/201-20 ದಿನಾಂಕ:- 15-09-2022 | November 2020 to February 2021 | 10,000 | 40000 |
| [illegible] | ಮಂಡ್ಯ | ಮಂಡ್ಯ | ಶ್ರೀ ಕೆ.ಚನ್ನೇಗೌಡ | ಹೌದು | - | ಕೆ.ಚನ್ನೇಗೌಡ ಬಿನ್ ಮೂರುಬೆಲೆ ಕಾಳೇಗೌಡ | ಪಿ.ಎಫ್ ,ಎಸ್ 04/201-20 ದಿನಾಂಕ:- 15-09-2022 | November 2020 toJanuary 2021 | 10,000 | 30000 |
| 20 | ಮಂಡ್ಯ | ಮಂಡ್ಯ | ಶ್ರೀ ಕೆ ವಿ ಶಂಕರಗೌಡ | ಇಲ್ಲ | - | ಕಾನೂನು ಬದ್ಧ ವಾರಸುದಾರರಾದ ಇವರು ಕೊಟ್ಟಿರುವ ವಿಳಾಸದಲ್ಲಿ ವಾಸವಿದ್ದು ಅವರ ಮಕ್ಕಳು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. | ಪಿ.ಎಫ್ ,ಎಸ್ 04/201-20 ದಿನಾಂಕ:- 15-09-2022 | November 2020 to october 2021 | 10,000 | 120000 |
| 21 | ಮಂಡ್ಯ | ಮಂಡ್ಯ | ಶ್ರೀ ಎಂ.ಸಿ.ಲಕ್ಷ್ಮಿನಾರಾಯಣ ಅಯ್ಯಂಗಾರ್ | ಇಲ್ಲ | 02-01-1993 | ಕಮಲಮ್ಮ ಕೋಂ ಲೇ: ಎಂ.ಸಿ.ಲಕ್ಷ್ಮಿನಾರಾಯಣ ಅಯ್ಯಂಗಾರ್ | ಪಿ.ಎಫ್ ,ಎಸ್ 04/201-20 ದಿನಾಂಕ:- 15-09-2022 | November 2020 to september 2021 | 10,000 | 110000 |
| 22 | ಮಂಡ್ಯ | ಮಂಡ್ಯ | ಶ್ರೀ ಪಾಷಖಾನ್ | ಇಲ್ಲ | 10-04-1996 | ಪಿರಂಬಿ ಕೋಂ ಲೇ: ಪಾಷಖಾನ್ | ಪಿ.ಎಫ್ ,ಎಸ್ 04/201-20 ದಿನಾಂಕ:- 15-09-2022 | November 2020 toJanuary 2021 | 10,000 | 30000 |
| 23 | ಮಂಡ್ಯ | ಮಂಡ್ಯ | ಶ್ರೀ ಕೆ.ಎಲ್.ಮೂರ್ತಿ | ಇಲ್ಲ | 10-12-1997 | ನಾಗರತ್ನಮ್ಮ ಕೋಂ ಲೇ: ಕೆ.ಎಲ್.ಮೂರ್ತಿ | ಪಿ.ಎಫ್ ,ಎಸ್ 04/201-20 ದಿನಾಂಕ:- 15-09-2022 | November 2020 to october 2021 | 10,000 | 120000 |
| 24 | ಮಂಡ್ಯ | ಮಂಡ್ಯ | ಶ್ರೀ ಚಿಕ್ಕಣ್ಣಶೆಟ್ಟಿ | ಇಲ್ಲ | 23-04-1994 | ನರಸಮ್ಮ ಕೋಂ ಲೇ ಚಿಕ್ಕಣ್ಣಶೆಟ್ಟಿ ಅವರ ಮಗ ನಾರಾಯಣಶೆಟ್ಟಿ | ಪಿ.ಎಫ್ ,ಎಸ್ 04/201-20 ದಿನಾಂಕ:- 15-09-2022 | November 2020 to February 2021 | 10,000 | 40000 |
| 25 | ಮಂಡ್ಯ | ಮಂಡ್ಯ | ಶ್ರೀ ಕೆ ಲಕ್ಷ್ಮಣನ್ | ಇಲ್ಲ | - | ಕಾನೂನು ಬದ್ಧ ವಾರಸುದಾರರಾದ ಇವರು ಕೊಟ್ಟಿರುವ ವಿಳಾಸದಲ್ಲಿ ವಾಸವಿರುವುದಿಲ್ಲ ಹಾಗೂ ದೂರವಾಣಿ ಸಂಪರ್ಕಕ್ಕೂ ಸಿಗುತ್ತಿಲ್ಲ. | ಪಿ.ಎಫ್ ,ಎಸ್ 04/201-20 ದಿನಾಂಕ:- 15-09-2022 | Mar-21 | 10,000 | 10000 |
| 26 | ಮಂಡ್ಯ | ಮಂಡ್ಯ | ಶ್ರೀ ಕಾಳಲಿಂಗೇಗೌಡ | ಇಲ್ಲ | 22-05-2014 | ಕೆಂಪಮ್ಮ ಕೋಂ ಲೇ ಕಾಳಲಿಂಗೇಗೌಡ ಅವರ ಮಗ ಪ್ರಕಾಶ್ | ಪಿ.ಎಫ್ ,ಎಸ್ 04/201-20 ದಿನಾಂಕ:- 15-09-2022 | Mar-21 | 10,000 | 10000 |